**V Semester B.Com. Examination, November/December 2018**
**(CBCS) (Semester Scheme) (F + R)**
**(2017-18 and Onwards)**
**COMMERCE**
**5.6 : Elective Paper – II – Goods and Services Tax**
**(Common to Accounting and Taxation/Finance Groups)**

Time : 3 Hours Max. Marks : 70

***Instruction** : Answer should be written **completely** in **Kannada** or in **English**.*

SECTION – A

1. Answer **any 5** sub-questions. **Each** sub-question carries **2** marks. **(5×2=10)**
   a) Define goods.
   b) What is GST Council ?
   c) What is composite supply ?
   d) What is self-assessment ?
   e) Give the meaning of G.S.P.
   f) What is meant by 'Place of Business' ?
   g) When will a non-resident become liable for registration under GST Act ?

SECTION – B

Answer **any 3** questions from the following. **Each** question carries **6** marks. **(3×6=18)**

2. Explain briefly about mixed supply and exempt supply.

3. Discuss the salient features of GSTN.

4. Compute the transaction value of taxable goods and IGST payable from the following information. Whole sale price of a product sold to Gujarath from a dealer in Bangalore. (Including GST 12%) ₹ 2,10,000

   The following items are not included in the price.

| | |
|---|---|
| 1) Secondary packing cost | ₹ 10,800 |
| 2) Cost of special packing | ₹ 16,200 |
| 3) Cost of returnable packing | ₹ 8,000 |
| 4) Freight and insurance | ₹ 7,500 |
| 5) Trade discount | ₹ 20,000 |

5. The Dev hotel group of companies provided the following services within state of Karnataka from its various branches. Compute the amount of GST payable for the month of November, 2017.
   1) Supply of food outdoor catering @ 18% GST ₹ 2,50,000.
   2) Renting of Hotel rooms @ 18% GST ₹ 3,25,000.
   3) Supply of food and drink in restaurant having licence to serve liquor @ 28% GST ₹ 1,95,000.
   4) Supply of food and drink in AC restaurant in 5 star and above rated hotel @ 28% GST ₹ 5,00,000.
   5) Supply of food or drink in restaurant not having facilities of Air condition @ 12% GST ₹ 4,00,000.

6. Calculate GST payable by a registered dealer in Bangalore from the following details. The rate of GST applicable is 12%.
   1) Sales made to a registered dealer in Dharawad ₹ 5,25,000.
   2) Sales made to a registered dealer in Karwar ₹ 4,10,000.
   3) Goods transfer to a branch in Mysore ₹ 1,00,000.

   The following are the returns made by the dealer.
   a) Goods returned from dealer of Dharawad ₹ 50,000 within one month.
   b) Goods returned from dealer of Karwar after 8 months ₹ 10,000.

## SECTION – C

Answer **any 3** questions. **Each** question carries **14** marks. **(3×14=42)**

7. Explain the salient features of CGST Act, 2017.

8. Who are the persons liable for registration and not liable for registration under GST Act, 2017 ? Explain.

9. Mr. Madan a dealer submits the following information in relation to manufacture and selling of water pumps. Compute the Transaction Value from the following information.

| **Particulars** | **Amount** |
|---|---|
| | ₹ |
| Import of Raw-material (Excluding 20% BCD on import and 12% IGST) | 4,20,000 |
| Raw-materials purchased from Karnataka (including CGST at 14% and SGST @ 14%) | 4,81,600 |

| | |
|---|---|
| Subsidy received from an NGO which was directly related to price of the goods | 11,000 |
| Raw material from Goa including GST @ 5% | 84,000 |
| Penalty levied by Mr. Madan for delayed payment | 1,000 |
| Subsidy received from Central Government which was directly linked to the price of the product | 34,000 |
| Additional incentives paid to the employees | 9,000 |
| Warranty and manufacturing charges | 40,000 |
| Service received from a regd. dealer to manufacture a machinery rate of GST applicable to these services is 12% | 25,000 |

Along with the machine he supplied 3 different necessary components at a fixed price of ₹ 40,000 each.

Mr. Madan is a registered dealer and he sold the machine a profit of 10%.

10. From the following details, compute the value of taxable services and GST payable for the month of March 2018. If the rate of CGST is 14% and SGST is 14%.

| **Particulars** | **Amount** ₹ |
|---|---|
| 1) Services relating to supply of farm labour | 4,50,000 |
| 2) Services providing to foreign diplomatic mission | 8,00,000 |
| 3) Aerial advertising | 1,80,000 |
| 4) Services by way of private tuitions | 1,70,000 |
| 5) Speed post services | 50,000 |
| 6) House given on rent for residential purposes | 2,00,000 |
| 7) Value of free services rendered to friends | 7,50,000 |
| 8) Certification for exchange control purpose | 2,50,000 |
| 9) Secretarial Auditing | 25,000 |
| 10) Liquidator fee | 3,00,000 |
| 11) Vacant land used for Horticulture | 2,00,000 |
| 12) Sale of time slot to broadcasting organisation | 5,00,000 |

11. Mr. Paul a registered dealer in Maharashtra submits the following information for the month of December, 2017.

Details of transaction.

| Particulars | Amount ₹ | GST Rate |
|---|---|---|
| **Details of Purchase :** | | |
| 1) Raw materials purchased from Bangalore | 5,00,000 | 5% |
| 2) Local Raw-materials purchased material 'M' | 8,00,000 | 12% |
| 3) Raw-material purchased from USA costing ₹ 8,00,000 (including BCD at 10% i,e, ₹ 80,000 and Excluding IGST) | 10,00,000 | 18% |
| 4) Local purchase of Raw-material 'Z' within the state from a dealer who opted for composition scheme | 4,00,000 | 2% |
| 5) Raw-material 'A' purchased from SEZ in Mumbai | 4,00,000 | 0% |
| **Details of Sales :** | | |
| 1) Sales of goods purchased from inter-state purchase and imported Raw-material to a person (Bihar) who opted for composition scheme | 10,00,000 | 5% |
| 2) Goods sold to an unregistered dealer of Pune | 75,00,000 | 12% |
| 3) Sale of goods to a Union Territory of Pondicherry produced from RM 'M' | 14,00,000 | 18% |
| 4) Sale of goods purchased from RM 'Z' to a registered dealer in Nagpur (Maharashtra) | 15,00,000 | 18% |
| 5) Sale of goods purchased from Raw-material 'A' to SEZ. Mumbai | 5,00,000 | 28% |

Calculate the Net GST payable by the dealer. The above Purchases and Sales an exclusive of GST.

## ಕನ್ನಡ ಆವೃತ್ತಿ

### ವಿಭಾಗ – ಎ

1. ಯಾವುದಾದರೂ **5** ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆಗೆ **2** ಅಂಕಗಳು. **(5×2=10)**

   a) 'ಸರಕುಗಳು' ವ್ಯಾಖ್ಯಾನಿಸಿ.

   b) GST ಮಂಡಳಿ ಎಂದರೇನು ?

   c) ಸಂಯುಕ್ತ ಪೂರೈಕೆ ಎಂದರೇನು ?

   d) ಸ್ವಂತ ತೆರಿಗೆ ನಿರ್ಧಾರ ಎಂದರೇನು ?

   e) G.S.P. ಯ ಅರ್ಥವನ್ನು ನೀಡಿ.

   f) 'ವ್ಯಾಪಾರದ ಸ್ಥಳ' ಎಂದರೇನು ?

   g) ಸರಕು ಮತ್ತು ಸೇವಾ ತೆರಿಗೆ (GST Act) ಕಾಯಿದೆಯ ಅನ್ವಯ ಅನಿವಾಸಿ ವರ್ತಕನು ಯಾವಾಗ ನೊಂದಾಯಿಸಬೇಕಾಗುತ್ತದೆ ? ತಿಳಿಸಿ.

### ವಿಭಾಗ – ಬಿ

ಯಾವುದಾದರೂ **3** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **6** ಅಂಕಗಳು. **(3×6=18)**

2. ಮಿಶ್ರ ಪೂರೈಕೆ ಹಾಗೂ ತೆರಿಗೆ ವಿನಾಯಿತಿ ಪೂರೈಕೆಯ ಕುರಿತು ವಿವರಿಸಿ.

3. GSTNನ ಸಾಮಾನ್ಯ ಲಕ್ಷಣಗಳನ್ನು ಕುರಿತು ಚರ್ಚಿಸಿ.

4. ಈ ಕೆಳಕಂಡ ವಿವರಗಳಿಂದ, ತೆರಿಗೆ ಒಳಪಡುವ ವ್ಯವಹಾರದ ಮೌಲ್ಯವನ್ನು ಮತ್ತು IGST ಸಂದಾಯದ ಮೊತ್ತವನ್ನು ಕಂಡುಹಿಡಿಯಿರಿ. ಬೆಂಗಳೂರಿನ ವರ್ತಕ ಗುಜರಾತಿಗೆ ಮಾರಾಟ ಮಾಡಿದ ಸರಕಿನ ಸಗಟು ಮಾರಾಟ ದರ (GST ದರ ಶೇ. 12 ಸೇರಿದೆ) ₹ 2,10,000.

   ಈ ಕೆಳಕಂಡವುಗಳು ಮೇಲೆ ತಿಳಿಸಿದ ದರದ ಮೊತ್ತದಲ್ಲಿ ಸೇರಿಸಿಲ್ಲ.

| | |
|---|---|
| 1) ದ್ವಿತೀಯ ಪ್ಯಾಕಿಂಗ್ ವೆಚ್ಚ | ₹ 10,800 |
| 2) ವಿಶೇಷ ಪ್ಯಾಕಿಂಗ್ ವೆಚ್ಚ | ₹ 16,200 |
| 3) ಮರುಹಿಂತಿರುಗಿಸುವ ಪ್ಯಾಕಿಂಗ್ ವೆಚ್ಚ | ₹ 8,000 |
| 4) ಸಾಗಾಣಿಕಾ ವೆಚ್ಚ ಮತ್ತು ವಿಮಾವೆಚ್ಚ | ₹ 7,500 |
| 5) ವ್ಯಾಪಾರದ ಸೋಡಿ | ₹ 20,000 |

5. ದೇವ್ ಹೋಟೆಲ್ ಸಮೂಹದ ಕಂಪನಿಯು ಕರ್ನಾಟಕ ರಾಜ್ಯದಲ್ಲಿ ವಿವಿಧ ಶಾಖೆಗಳಿಂದ ಈ ಕೆಳಕಂಡ ಸೇವೆಗಳನ್ನು ನೀಡಿದ ವಿವರಗಳನ್ನು ಸಲ್ಲಿಸಿದೆ. ಈ ಮಾಹಿತಿಯಿಂದ ನವೆಂಬರ್, 2017 ರ ಒಟ್ಟು GST ಸಂದಾಯದ ಹೊಣೆಯನ್ನು ಕಂಡುಹಿಡಿಯಿರಿ.
   1) ಹೊರಾಂಗಣದ ಆಹಾರ ಸರಬರಾಜಿನ ವೆಚ್ಚ ₹ 2,50,000 GST ದರ 18%.
   2) ಹೋಟೆಲ್ ರೂಮುಗಳನ್ನು ಬಾಡಿಗೆ ನೀಡಿದ್ದು, GST ದರ 18%, ₹ 3,25,000.
   3) ಮದ್ಯವನ್ನು ಸರಬರಾಜು ಮಾಡಲು ಅನುಮತಿಯಿರುವ ಉಪಹಾರ ಗೃಹದಲ್ಲಿ ಆಹಾರ ಮತ್ತು ಪಾನೀಯ ಸರಬರಾಜು ಮಾಡಿದ್ದು GSTದರ 28%, ₹ 1,95,000.
   4) ಪಂಚತಾರಾ ಅಥವಾ ಅದಕ್ಕೂ ಮೇಲ್ಪಟ್ಟ ದರ್ಜೆಯ ಹವಾ ನಿಯಂತ್ರಿತ ಉಪಹಾರ ಗೃಹದಲ್ಲಿ ಆಹಾರ ಮತ್ತು ಪಾನೀಯ ಸರಬರಾಜಿನ ಮೌಲ್ಯ ₹ 5,00,000 GST ದರ 28%.
   5) ಹವಾನಿಯಂತ್ರಿತ ವ್ಯವಸ್ಥೆ ಇಲ್ಲದ ಉಪಹಾರ ಗೃಹದಲ್ಲಿ ಆಹಾರ ಅಥವಾ ಪಾನೀಯ ಸರಬರಾಜಿನ ಮೌಲ್ಯ ₹ 4,00,000, GST ದರ 12%.

6. ಈ ಕೆಳಕಂಡ ವಿವರಗಳಿಂದ, ಬೆಂಗಳೂರಿನಲ್ಲಿ ನೊಂದಾಯಿಸಿದ ವ್ಯಾಪಾರಿಯು ಎಷ್ಟು GST ಸಂದಾಯ ನೀಡಬೇಕಾಗುತ್ತದೆ ಎಂಬುದನ್ನು ತಿಳಿಸಿ. ಈ ಕೆಳಗಿನ ವ್ಯವಹಾರಕ್ಕೆ 12% ರಷ್ಟು GST ದರ ಅನ್ವಯಿಸುತ್ತದೆ.
   1) ಧಾರವಾಡ ನೊಂದಾಯಿತ ವರ್ತಕನಿಗೆ ಮಾರಿದ ಮಾರಾಟ ಮೌಲ್ಯ ₹ 5,25,000.
   2) ಕಾರವಾರದ ನೊಂದಾಯಿತ ವರ್ತಕನಿಗೆ ಮಾರಿದ ಮಾರಾಟ ಮೌಲ್ಯ ₹ 4,10,000.
   3) ಮೈಸೂರಿನ ಶಾಖೆಗೆ ಸರಕನ್ನು ವರ್ಗಾಯಿಸಿದ ಮೌಲ್ಯ ₹ 1,00,000.

   ವ್ಯಾಪಾರಿಗಳು ಈ ಕೆಳಕಂಡಂತೆ ಸರಕನ್ನು ಹಿಂತಿರುಗಿಸಿರುತ್ತಾರೆ.
   a) ಧಾರವಾಡದ ವ್ಯಾಪಾರಿಯು ₹ 50,000 ಮೌಲ್ಯದ ಸರಕನ್ನು ಒಂದು ತಿಂಗಳ ಒಳಗಾಗಿ ಹಿಂತಿರುಗಿಸಿರುತ್ತಾರೆ.
   b) ಕಾರವಾರದ ವ್ಯಾಪಾರಿಯು ₹ 10,000 ಮೌಲ್ಯದ ಸರಕನ್ನು 8 ತಿಂಗಳ ನಂತರ ಹಿಂತಿರುಗಿಸಿರುತ್ತಾರೆ.

## ವಿಭಾಗ – ಸಿ

ಯಾವುದಾದರೂ **3** ಪ್ರಶ್ನೆಗೆ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ **14** ಅಂಕಗಳು. **(3×14=42)**

7. CGST ಕಾಯ್ದೆ, 2017ರ ಸಾಮಾನ್ಯ ಲಕ್ಷಣಗಳನ್ನು ವಿವರಿಸಿರಿ.

8. ಸರಕು ಮತ್ತು ಸೇವೆಗಳ ಕಾಯಿದೆ, 2017ರ ಅನ್ವಯ ಯಾವ ವ್ಯಕ್ತಿಗಳು ಅವಶ್ಯಕವಾಗಿ ನೊಂದಾಯಿಸಬೇಕು ಮತ್ತು ಯಾವ ವ್ಯಕ್ತಿಗಳು ನೊಂದಾಯಿಸುವ ಅವಶ್ಯಕತೆ ಇಲ್ಲ ? ವಿವರಿಸಿ.

9. ಶ್ರೀ ಮದನ್ ಎಂಬ ವರ್ತಕನು ನೀರಿನ ಪಂಪ್‌ಗಳ ಉತ್ಪಾದನಾ ಮತ್ತು ಮಾರಾಟದ ವೆಚ್ಚಗಳ ವಿವರಗಳನ್ನು ಸಲ್ಲಿಸಿರುತ್ತಾರೆ. ಇದರಿಂದ ವ್ಯವಹಾರದ ಮೌಲ್ಯವನ್ನು ಕಂಡುಹಿಡಿಯಿರಿ.

| ವಿವರಗಳು | ಮೊಬಲಗು |
|---|---|
| | ₹ |
| ಆಮದು ಕಚ್ಚಾ ಸಾಮಗ್ರಿ (20% BCD ಹೊರತುಪಡಿಸಿ ಹಾಗೂ 12% IGST ಹೊರತುಪಡಿಸಿ) | 4,20,000 |
| ಕರ್ನಾಟಕದಿಂದ ಕಚ್ಚಾವಸ್ತು ಖರೀದಿಸಿದ್ದು (CGST 14% ಹಾಗೂ SGST 14% ಸೇರಿದೆ) | 4,81,600 |

| | |
|---|---|
| ಸರಕಿನ ಬೆಲೆಗೆ ನೇರವಾಗಿ ಸಂಬಂಧಿಸಿದ ಹಾಗೂ NGO ದಿಂದ ಪಡೆದ ಸಬ್ಸಿಡಿ ಮೌಲ್ಯ | 11,000 |
| ಗೋವಾದಿಂದ ಖರೀದಿಸಿದ ಕಚ್ಚಾವಸ್ತು GST @ 5% ಸೇರಿದೆ. | 84,000 |
| ನಿಧಾನ ಸಂದಾಯಕ್ಕಾಗಿ ಮದನ್‌ರವರು ನೀಡಿದ ದಂಡ | 1,000 |
| ಕೇಂದ್ರ ಸರ್ಕಾರ ನೀಡಿದ ಸಹಾಯಧನ ನೇರವಾಗಿ ಉತ್ಪನ್ನ ದರಕ್ಕೆ ಸಂಬಂಧಿಸಿದ್ದಾಗಿದ್ದು ಇದರ ಮೌಲ್ಯ | 34,000 |
| ನೌಕರರಿಗೆ ಹೆಚ್ಚುವರಿ ಪ್ರೋತ್ಸಾಹಧನ | 9,000 |
| ವಾರೆಂಟಿ ಹಾಗೂ ಉತ್ಪಾದನಾ ಖರ್ಚುಗಳು | 40,000 |
| ನೊಂದಾಯಿತ ವರ್ತಕನಿಂದ ಉತ್ಪಾದನೆಗಾಗಿ ಪಡೆದ ಸೇವೆಗಳು GST ಅನ್ವಯಿಕ 12% | 25,000 |

ಈ ಯಂತ್ರದ ಜತೆಯಲ್ಲಿ ಅತ್ಯಾವಶ್ಯಕವಿರುವ 3 ವಿವಿಧ ಭಾಗಗಳನ್ನು ಪ್ರತಿಯೊಂದಕ್ಕೂ ನಿಗದಿತ ಬೆಲೆ ₹ 40,000ರಂತೆ ಸರಬರಾಜು ಮಾಡುತ್ತಾನೆ.

ಶ್ರೀ ಮದನ್‌ರವರು ನೊಂದಾಯಿತ ವರ್ತಕನಾಗಿದ್ದು ಅವರು ಯಂತ್ರವನ್ನು 10% ಲಾಭಕ್ಕೆ ಮಾರುತ್ತಾರೆ.

10. ಈ ಕೆಳಕಂಡ ಮಾಹಿತಿಯಿಂದ 2018 ಮಾರ್ಚ್ ತಿಂಗಳಿಗೆ ಅನುವಾಗುವಂತೆ, ಕರಾರ್ಹ ಸೇವೆಗಳ ಮೌಲ್ಯ ಹಾಗೂ GST ಹೊಣೆಯನ್ನು ಕಂಡುಹಿಡಿಯಿರಿ. CGST ದರ 14% ಹಾಗೂ SGST ದರ 14% ರಷ್ಟು ಇರುತ್ತದೆ.

| ವಿವರಗಳು | ಮೊಬಲಗು ₹ |
|---|---|
| 1) ಕೃಷಿ ಕಾರ್ಮಿಕ ಸರಬರಾಜು ಸೇವೆಗಳು | 4,50,000 |
| 2) ವಿದೇಶಿ ರಾಜತಾಂತ್ರಿಕ ಮಿಷನ್‌ಗೆ ಸೇವೆ ಸಲ್ಲಿಸಿದ್ದು | 8,00,000 |
| 3) ಅಂತರಿಕ್ಷ ಜಾಹೀರಾತು | 1,80,000 |
| 4) ಖಾಸಗಿ ಕಲಿಕಾ ಸೇವೆಗಳು | 1,70,000 |
| 5) ವೇಗದ ಅಂಚೆ ಸೇವೆಗಳು | 50,000 |
| 6) ವಾಸದ ಉದ್ದೇಶಕ್ಕಾಗಿ ಮನೆಯನ್ನು ಬಾಡಿಗೆಗೆ ನೀಡಿದ್ದು | 2,00,000 |
| 7) ಮಿತ್ರರಿಗೆ ಉಚಿತ ಸೇವೆ ಸಲ್ಲಿಸಿದ ಮೌಲ್ಯ | 7,50,000 |
| 8) ವಿನಿಮಯ ನಿಯಂತ್ರಣ ಉದ್ದೇಶಕ್ಕಾಗಿ ಪ್ರಮಾಣೀಕರಣ | 2,50,000 |
| 9) ಕಾರ್ಯದರ್ಶಿಯ ಲೆಕ್ಕಪರಿಶೋಧನೆ | 25,000 |
| 10) ಪರಿಮಾಪಕ (Liquidator) ನ ಶುಲ್ಕ | 3,00,000 |
| 11) ಖಾಲಿ ಭೂಮಿಯನ್ನು ತೋಟಗಾರಿಕೆಗಾಗಿ ಉಪಯೋಗ | 2,00,000 |
| 12) ಪ್ರಸಾರ ಸಂಸ್ಥೆಗೆ ನಿಗದಿತ ಸಮಯ ಮಾರಾಟ | 5,00,000 |

11. ಮಹಾರಾಷ್ಟ್ರ ರಾಜ್ಯದ ಶ್ರೀ ಪಾಲ್‌ರು ನೊಂದಾಯಿಸಿದ ವರ್ತಕರಾಗಿದ್ದು, 2017 ಡಿಸೆಂಬರ್ ತಿಂಗಳ, ಈ ಕೆಳಕಂಡ ವ್ಯವಹಾರದ ಮಾಹಿತಿಯನ್ನು ನೀಡಿರುತ್ತಾರೆ.

| ವಿವರಗಳು | ಮೊಬಲಗು ₹ | GST Rate |
|---|---|---|
| **ಖರೀದಿಯ ವಿವರಗಳು :** | | |
| 1) ಬೆಂಗಳೂರಿನಿಂದ ಕಚ್ಚಾ ಸಾಮಗ್ರಿ ಖರೀದಿಸಿದ್ದು | 5,00,000 | 5% |
| 2) ಸ್ಥಳೀಯ ಕಚ್ಚಾವಸ್ತು 'M' ಖರೀದಿಸಿದ್ದು | 8,00,000 | 12% |
| 3) ₹ 8,00,000 ಬೆಲೆಯ ಕಚ್ಚಾವಸ್ತುವನ್ನು USAಯಿಂದ ಕೊಂಡದ್ದು (ಇದರಲ್ಲಿ 10% BCD ಅಂದರೆ, i.e. ₹ 80,000 ಸೇರಿದೆ ಹಾಗೂ IGST ಹೊರತುಪಡಿಸಿ) | 10,00,000 | 18% |
| 4) ರಾಜ್ಯದಲ್ಲಿನ ಮಿಶ್ರ ಕಾರ್ಯ ಯೋಜನೆಯ ವರ್ತಕನಿಂದ ಸ್ಥಳೀಯ ಕಚ್ಚಾವಸ್ತು 'Z' ಅನ್ನು ಖರೀದಿಸಿದೆ | 4,00,000 | 2% |
| 5) ಮುಂಬಯಿನ ವಿಶೇಷ ಆರ್ಥಿಕ ವಲಯ (SEZ) ದಿಂದ ಕಚ್ಚಾ ಸಾಮಗ್ರಿ 'A' ಅನ್ನು ಖರೀದಿಸಲಾಗಿದೆ | 4,00,000 | 0% |
| **ಮಾರಾಟದ ವಿವರಗಳು :** | | |
| 1) ಮಿಶ್ರ ಕಾರ್ಯ ಯೋಜನೆಯ ವರ್ತಕನಿಗೆ (ಬಿಹಾರ) ಅಂತರ ರಾಜ್ಯ ವ್ಯವಹಾರದಲ್ಲಿ ಕೊಂಡ ಕಚ್ಚಾ ಸಾಮಗ್ರಿ ಹಾಗೂ ಆಮದು ಕಚ್ಚಾ ಸಾಮಗ್ರಿಯ ಸರಕಿನ ಮಾರಾಟದ ಮೌಲ್ಯ | 10,00,000 | 5% |
| 2) ಪುಣೆಯ ನೊಂದಾಯಿಸದ ವರ್ತಕನಿಗೆ ಮಾರಾಟ ಮಾಡಿದ್ದು | 75,00,000 | 12% |
| 3) ಕಚ್ಚಾ ಸಾಮಗ್ರಿ 'M'ನಿಂದ ತಯಾರಿಸಿದ ಸರಕನ್ನು ಒಕ್ಕೂಟದ ಪ್ರಾದೇಶಿಕ ಪಾಂಡಿಚೇರಿಯ ವರ್ತಕನಿಗೆ ಮಾರಾಟ ಮಾಡಿದ್ದು | 14,00,000 | 18% |
| 4) ಕೊಂಡ ಕಚ್ಚಾ ಸಾಮಗ್ರಿ 'Z'ನಿಂದ ತಯಾರಾದ ಸರಕನ್ನು ನಾಗಪುರದ (ಮಹಾರಾಷ್ಟ್ರ) ನೊಂದಾಯಿಸಿದ ವರ್ತಕನಿಗೆ ಮಾರಾಟದ ಮೌಲ್ಯ | 15,00,000 | 18% |
| 5) ಮುಂಬಯಿನ ವಿಶೇಷ ಆರ್ಥಿಕ ವಲಯ ವರ್ತಕನಿಗೆ (SEZ) ಕೊಂಡ ಕಚ್ಚಾ ಸಾಮಗ್ರಿ 'A'ನ ಸರಕನ್ನು ಮಾರಾಟ ಮಾಡಿದ್ದು | 5,00,000 | 28% |

ಮೇಲಿನ ಎಲ್ಲಾ ಖರೀದಿಗಳು ಮತ್ತು ಮಾರಾಟಗಳಲ್ಲಿ GSTಯನ್ನು ಹೊರತುಪಡಿಸಲಾಗಿದೆ. ನಿವ್ವಳ GST ಸಂದಾಯದ ಮೊತ್ತವನ್ನು ಕಂಡುಹಿಡಿಯಿರಿ.

---